**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1688** |
| **ಸದಸ್ಯರ ಹೆಸರು** | : | **ಡಾ|| ಎಂ.ಜಿ. ಮುಳೆ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **18.03.2026.** |
| **ಉತ್ತರಿಸುವ ಸಚಿವರು** | : | **ಕಂದಾಯ ಸಚಿವರು** |

| ಕ್ರ. ಸಂ., | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿ, ಅನಾವೃಷ್ಟಿ ಅಥವಾ ಅಕಾಲಿಕ ಮಳೆಯಿಂದಾಗಿ ಬೆಳೆ ಹಾನಿಗೊಳಗಾಗಿ ಸರ್ಕಾರದಿಂದ ಪರಿಹಾರ ಪಡೆದ ರೈತರ ಒಟ್ಟು ಸಂಖ್ಯೆ ಎಷ್ಟು; ಪರಿಹಾರವಾಗಿ ವಿತರಿಸಲಾದ ಒಟ್ಟು ಮೊತ್ತ ಎಷ್ಟು; (ತಾಲ್ಲೂಕುವಾರು ಹಾಗೂ ವರ್ಷವಾರು ವಿವರ ನೀಡುವುದು) | 2024-25 ನೇ ಸಾಲಿನಲ್ಲಿ ಅತಿವೃಷ್ಟಿಯಿಂದಾಗಿ ಬೆಳೆ ಹಾನಿಯಾದ ಒಟ್ಟು 29000 ರೈತರಿಗೆ ರೂ 13.03 ಕೋಟಿ ಇನ್ಪುಟ್ ಸಬ್ಸಿಡಿಯನ್ನು ನೇರವಾಗಿ ರೈತರ ಖಾತೆಗೆ DBT ಮೂಲಕ ಜಿಲ್ಲಾಧಿಕಾರಿಗಳು ಜಮೆ ಮಾಡಿರುತ್ತಾರೆ. ಇನ್ಪುಟ್ ಸಬ್ಸಿಡಿ ಪಾವತಿಯ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>2025-26 ನೇ ಸಾಲಿನ ಅತಿವೃಷ್ಠಿಯಿಂದಾಗಿ ಬೆಳೆ ಹಾನಿಯಾದ ಒಟ್ಟು 193054 ರೈತರಿಗೆ ರೂ 276.98 ಕೋಟಿ ಇನ್ಪುಟ್ ಸಬ್ಸಿಡಿಯನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡಲಾಗಿರುತ್ತದೆ. ಇನ್ಪುಟ್ ಸಬ್ಸಿಡಿ ಪಾವತಿಯ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಆ) | ರೈತರು ಬೆಳೆ ಹಾನಿ ವರದಿ ಸಲ್ಲಿಸಿದ ದಿನಾಂಕದಿಂದ ಅವರ ಬ್ಯಾಂಕ್ ಖಾತೆಗೆ ಪರಿಹಾರದ ಮೊತ್ತ ಜಮೆಯಾಗಲು ಸರ್ಕಾರ ಸರಾಸರಿಯಾಗಿ ತೆಗೆದುಕೊಳ್ಳುವ ಅವಧಿ ಎಷ್ಟು ದಿನಗಳು; ಪರಿಹಾರ ವಿತರಣೆಯಲ್ಲಿ ಉಂಟಾಗುತ್ತಿರುವ ವಿಳಂಬದ ಪ್ರಮುಖ ಕಾರಣಗಳು ಯಾವುವು; ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡಿರುವ ಸುಧಾರಣಾತ್ಮಕ ಕ್ರಮಗಳೇನು | ಅತಿಯಾದ ಮಳೆಯಿಂದ ಬೆಳೆಹಾನಿಯಾದ ಜಮೀನುಗಳನ್ನು ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳಿಂದ ಬೆಳೆಹಾನಿ ಪ್ರದೇಶಗಳ ಜಂಟಿ ಸಮೀಕ್ಷೆಯನ್ನು ನಡೆಸಿ ತಹಶೀಲ್ದಾರ್ ಮತ್ತು ಉಪವಿಭಾಗಾಧಿಕಾರಿಗಳ ಮುಖಾಂತರ ಗ್ರಾಮವಾರು ಕ್ರೋಢೀಕೃತ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸಲಾಗುವುದು. ಜಿಲ್ಲಾಧಿಕಾರಿ-ಗಳಿಂದ ಅನುಮೋದನೆಗೊಂಡ ಬೆಳೆಹಾನಿಯ ವಿವರಗಳ ತಃಖ್ತೆಗಳನ್ನು 07 ದಿನಗಳ ಕಾಲಾವಕಾಶ ನೀಡಿ, ಆಕ್ಷೇಪಣೆಗಳಿಗಾಗಿ ಸಾರ್ವಜನಿಕವಾಗಿ ಪ್ರಕಟಗೊಳಿಸಲಾಗುವುದು. ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿ, ಜಿಲ್ಲಾಧಿಕಾರಿಗಳು, ಗ್ರೀನ್ ಲಿಸ್ಟನ್ನು ಭೂಮಿ ಉಸ್ತುವಾರಿ ಕೋಶಕ್ಕೆ ಕಳುಹಿಸುತ್ತಾರೆ. ಭೂಮಿ ಉಸ್ತುವಾರಿ ಕೋಶ ಮತ್ತು ಫ್ರೂಟ್ಸ್ ಕೋಶದಲ್ಲಿ ಪರಿಶೀಲನೆಯ ನಂತರ ಡಿ.ಬಿ.ಟಿ ಮುಖಾಂತರ ಕೇಂದ್ರ ಗೃಹ ಮಂತ್ರಾಲಯದ ದಿನಾಂಕ: 11.07.2023ರ ಮಾರ್ಗಸೂಚಿಗಳನ್ವಯ ಮಳೆಯಾಶ್ರಿತ, ನೀರಾವರಿ ಮತ್ತು ಬಹುವಾರ್ಷಿಕ ಬೆಳೆಹಾನಿಗಳಿಗೆ ಗರಿಷ್ಠ 2 ಹೆಕ್ಟೇರ್‌ಗೆ ಇನ್ಪುಟ್ ಸಬ್ಸಿಡಿಯನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಪಾವತಿಸಲಾಗುವುದು. ಈ ಎಲ್ಲಾ ಹಂತಗಳಲ್ಲಿ ಯಾವುದೇ ವಿಳಂಬವಾಗದಂತೆ ಬೆಳೆಹಾನಿಗೊಂಡ ರೈತರಿಗೆ ಇನ್ಪುಟ್ ಸಬ್ಸಿಡಿ ಪಾವತಿಸುವಲ್ಲಿ ತುರ್ತು ಕ್ರಮ ವಹಿಸಲಾಗುತ್ತಿದೆ. |

| | | |
|---|---|---|
| ಇ) | ಬೀದರ್ ಜಿಲ್ಲೆಯಲ್ಲಿ ಬೆಳೆ ನಷ್ಟದ ಅಂದಾಜು ಮಾಡುವ ವೇಳೆ ಮಾನವ ಹಸ್ತಕ್ಷೇಪ ಕಡಿಮೆ ಮಾಡಿ ನಿಖರತೆ ಕಾಯ್ದುಕೊಳ್ಳಲು ಜಿಯೋ-ಟ್ಯಾಗಿಂಗ್ (Geo-tagging), ಡ್ರೋನ್ ಸಮೀಕ್ಷೆ ಮತ್ತು ಮೊಬೈಲ್ ಆಧಾರಿತ ಬೆಳೆ ಸಮೀಕ್ಷೆ (Crop Survey) ಅಪ್ಲಿಕೇಶನ್‌ಗಳನ್ನು ಬಳಸಲಾಗುತ್ತಿದೆಯೇ; ಬಳಸಿದ ಪ್ರಕರಣಗಳ ಸಂಖ್ಯೆ ಎಷ್ಟು; ಇದರ ಪರಿಣಾಮಕಾರಿತ್ವದ ಮೌಲ್ಯಮಾಪನ ನಡೆಸಲಾಗಿದೆಯ; | ಜಿಲ್ಲೆಯಲ್ಲಿ ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ರೈತರ ಬೆಳೆ ಮಾಹಿತಿಯನ್ನು ಬೆಳೆ ಸಮೀಕ್ಷೆ ಯೋಜನೆಯಡಿ ದಾಖಲಿಸಲಾಗುತ್ತಿರುತ್ತದೆ. ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಹಾಗೂ ಎಲ್ಲಾ ರೈತರ ತಾಕುಗಳ ಬಗ್ಗೆ GPS ಆಧಾರಿತ ಬೆಳೆ ಮಾಹಿತಿ ಸಂಗ್ರಹಿಸಿ ಇನ್ಪುಟ್ ಸಬ್ಸಿಡಿ ಪಾವತಿಯ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮ ವಹಿಸಿರುತ್ತಾರೆ. |
| ಈ) | ಕಳೆದ ಎರಡು ವರ್ಷಗಳಲ್ಲಿ ತಾಂತ್ರಿಕ ದೋಷಗಳು, ಆಧಾರ್ ಜೋಡಣೆ ಸಮಸ್ಯೆ, ಬ್ಯಾಂಕ್ ಖಾತೆ ವಿವರಗಳ ತೊಂದರೆ ಅಥವಾ ದಾಖಲೆಗಳ ಕೊರತೆಯಿಂದಾಗಿ ಪರಿಹಾರ ಸಿಗದೆ ಬಾಕಿ ಉಳಿದಿರುವ ರೈತರ ಪ್ರಕರಣಗಳ ಸಂಖ್ಯೆ ಎಷ್ಟು; ಇವುಗಳನ್ನು ಇತ್ಯರ್ಥಪಡಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು; ವಿಶೇಷ ಪರಿಹಾರ ಶಿಬಿರಗಳನ್ನು ಆಯೋಜಿಸಲಾಗಿದೆಯೇ; | ಕಳೆದ ಎರಡು ವರ್ಷಗಳಲ್ಲಿ ತಾಂತ್ರಿಕ ದೋಷಗಳು, ಆಧಾರ್ ಜೋಡಣೆ ಸಮಸ್ಯೆ, ಬ್ಯಾಂಕ್ ಖಾತೆ ವಿವರಗಳ ತೊಂದರೆ ಅಥವಾ ದಾಖಲೆಗಳ ಕೊರತೆಯಿಂದಾಗಿ ಪರಿಹಾರ ಸಿಗದೆ ಬಾಕಿ ಉಳಿದಿರುವ ರೈತರ ಪ್ರಕರಣಗಳ ಪಟ್ಟಿಯನ್ನು ಪಡೆದು ಸಂಬಂಧಪಟ್ಟ ತಾಲ್ಲೂಕುಗಳ ತಹಸೀಲ್ದಾರಗಳ ಮೂಲಕ ವಿಶೇಷ ಆಂದೋಲನ ನಡೆಸುವ ಮೂಲಕ ಜನರನ್ನು ಕರೆತಂದು ಬ್ಯಾಂಕಗಳಲ್ಲಿ ಆಧಾರ ಕಾರ್ಡ್ ಕಾಲೋಚಿತ ಮತ್ತು ಬ್ಯಾಂಕ ಖಾತೆಗಳಿಗೆ ಆಧಾರ ಕಾರ್ಡ್ ಲಿಂಕ್ ಮಾಡಿಸಿ ಕಾಲೋಚಿತಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮವಹಿಸಿರುತ್ತಾರೆ. |
| ಉ) | ರೈತರು ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು FRUITS (Farmer Registration and Unified Beneficiary Information System) ಪೋರ್ಟಲ್ ಅಥವಾ ಇತರೆ ಆನ್ ಲೈನ್ ವ್ಯವಸ್ಥೆಗಳ ಮೂಲಕ ಬೆಳೆ ಹಾನಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಸಂಪೂರ್ಣವಾಗಿ ಜಾರಿಯಲ್ಲಿದೆಯೇ; ಗ್ರಾಮೀಣ ಭಾಗದ ರೈತರಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಲು ಕೈಗೊಂಡಿರುವ ತರಬೇತಿ, ಗ್ರಾಮಸಭೆ ಅಥವಾ ಜಾಗೃತಿ ಅಭಿಯಾನಗಳ ವಿವರವೇನು? | ಜಿಲ್ಲೆಯಲ್ಲಿ FRUITS ತಂತ್ರಾಂಶದಲ್ಲಿ 311564 ರೈತರು ನೋಂದಾಯಿಸಿ ಕೊಂಡಿರುತ್ತಾರೆ. ಸರ್ಕಾರದ ಎಲ್ಲಾ ಸೌಲಭ್ಯಗಳು FRUITS ತಂತ್ರಾಂಶದ ಮುಖಾಂತರ ರೈತರ ಖಾತೆಗೆ ಸಂದಾಯ ಮಾಡಲಾಗುತ್ತಿದೆ. |

**ಕಡತ ಸಂಖ್ಯೆ:** ಕಂಇ 212 ಟಿಎನ್ಆರ್ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಬಂಧ-1

**2024-25 ನೇ ಸಾಲಿನ ಮುಂಗಾರು ಅವಧಿಯ ಅತೀವೃಷ್ಠಿಯಿಂದ ಬೀದರ್ ಜಿಲ್ಲೆಯಲ್ಲಿ ಆಗಿರುವ ಬೆಳೆಹಾನಿಯ ವಿವರ.**

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಪರಿಗಣಿಸಿರುವ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | ಪಾವತಿಸಿರುವ ಒಟ್ಟು ರೈತರ ಸಂಖ್ಯೆ | ಪಾವತಿಸಿರುವ ಇನ್ಪುಟ್ ಸಬ್ಸಿಡಿ ರೂ.ಗಳಲ್ಲಿ |
|---|---|---|---|---|---|
| 1 | ಬೀದರ್ | ಔರಾದ್ | 255.45 | 613 | 2192505.00 |
| 2 | | ಬಸವಕಲ್ಯಾಣ | 157.75 | 331 | 1426883.00 |
| 3 | | ಬಾಲ್ಕಿ | 7972.76 | 14174 | 68770624.00 |
| 4 | | ಬೀದರ್ | 4613.90 | 8574 | 40312318.00 |
| 5 | | ಚಿಟಗುಪ್ಪ | 519.66 | 1398 | 4564186.00 |
| 6 | | ಹುಲಸೂರು | 45.99 | 50 | 418075.00 |
| 7 | | ಹುಮ್ನಾಬಾದ್ | 1046.59 | 2694 | 9275943.00 |
| 8 | | ಕಮಲಾನಗರ | 382.29 | 1166 | 3405274.00 |
| | | ಒಟ್ಟು | **14994.39** | **29000** | **130365808** |

ಆಯುಕ್ತರು,
ಕೆಎಸ್‌ಡಿಎಂಎ & ಡಿಪಿಎಸ್‌ಎಸ್‌ಪಿ
ಕಂದಾಯ ಇಲಾಖೆ.

ಅನುಬಂಧ-2

**2025-26 ನೇ ಸಾಲಿನ ಮುಂಗಾರು ಅವಧಿಯ ಅತಿವೃಷ್ಟಿ/ಪ್ರವಾಹದಿಂದ ಆಗಿರುವ ತಾಲ್ಲೂಕುವಾರು ಬೆಳೆಹಾನಿ ಮತ್ತು SDRF ಮಾರ್ಗಸೂಚಿಗಳ ಅನ್ವಯ ಪಾವತಿಸಿರುವ ಇನ್ಪುಟ್ ಸಬ್ಸಿಡಿ ಪಾವತಿಯ ವಿವರಗಳು.**

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಪರಿಗಣಿಸಿರುವ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | ಪಾವತಿಸಿರುವ ಒಟ್ಟು ರೈತರ ಸಂಖ್ಯೆ | ಪಾವತಿಸಿರುವ ಇನ್ಪುಟ್ ಸಬ್ಸಿಡಿ ರೂ.ಗಳಲ್ಲಿ |
|---|---|---|---|---|---|
| 1 | ಬೀದರ್ | ಔರಾದ್ | 26136.24 | 28202 | 222423645.00 |
| 2 | | ಬಸವಕಲ್ಯಾಣ | 28816 95 | 34999 | 246229280.00 |
| 3 | | ಬಾಲ್ಕಿ | 34457.58 | 43897 | 297121120.00 |
| 4 | | ಬೀದರ್ | 20153.42 | 25860 | 172272534.00 |
| 5 | | ಚಿಟಗುಪ್ಪ | 8193.05 | 11679 | 69776661.00 |
| 6 | | ಹುಲಸೂರು | 6997.99 | 8056 | 59824316.00 |
| 7 | | ಹುಮ್ನಾಬಾದ್ | 16552.45 | 20019 | 143931167.00 |
| 8 | | ಕಮಲಾನಗರ | 20947.33 | 20342 | 178334952.00 |
| | | ಒಟ್ಟು | **162255.01** | **193054** | **1389913675** |

**2025-26 ನೇ ಸಾಲಿನ ಮುಂಗಾರು ಅವಧಿಯ ಅತಿವೃಷ್ಟಿ/ಪ್ರವಾಹದಿಂದ ಆಗಿರುವ ತಾಲ್ಲೂಕುವಾರು ಬೆಳೆಹಾನಿ ಮತ್ತು ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ಪಾವತಿಸಿರುವ ಇನ್ಪುಟ್ ಸಬ್ಸಿಡಿ ಪಾವತಿಯ ವಿವರಗಳು.**

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಪರಿಗಣಿಸಿರುವ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | ಪಾವತಿಸಿರುವ ಒಟ್ಟು ರೈತರ ಸಂಖ್ಯೆ | ಪಾವತಿಸಿರುವ ಇನ್ಪುಟ್ ಸಬ್ಸಿಡಿ ರೂ.ಗಳಲ್ಲಿ |
|---|---|---|---|---|---|
| 1 | ಬೀದರ್ | ಔರಾದ್ | 26136.24 | 28202 | 222227777.00 |
| 2 | | ಬಸವಕಲ್ಯಾಣ | 28816.95 | 34999 | 245072979.00 |
| 3 | | ಬಾಲ್ಕಿ | 34457.58 | 43897 | 293106659.00 |
| 4 | | ಬೀದರ್ | 20153.42 | 25860 | 171460862.00 |
| 5 | | ಚಿಟಗುಪ್ಪ | 8193.05 | 11679 | 69667009.00 |
| 6 | | ಹುಲಸೂರು | 6997.99 | 8056 | 59487641.00 |
| 7 | | ಹುಮ್ನಾಬಾದ್ | 16552.45 | 20019 | 140792787.00 |
| 8 | | ಕಮಲಾನಗರ | 20947.33 | 20342 | 178076791.00 |
| | | ಒಟ್ಟು | 162255.01 | 193054 | 1379892505 |

ಆಯುಕ್ತರು,
ಕೆಎಸ್‌ಡಿಎಂಎ & ಡಿಎಸ್‌ಎಸ್‌ಪಿ
ಕಂದಾಯ ಇಲಾಖೆ.